## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ. ಸಂಖ್ಯೆಃ **536/2024**

ಪಿರ್ಯಾದಿ : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಬಣಕಲ್.

ವಿರುದ್ಧ

ಆರೋಪಿ : ಗಿರಿಧರ ನಾಯ್ಕ @ ಶಶಿಕುಮಾರ @ ಶಶಿ,
ವಯಸ್ಸು ಸುಮಾರು 29 ವರ್ಷ,
ಬಿನ್ ಮೋಟ್ಲನಾಯ್ಕ ಎಲ್.,
ವಾಸಃ ಸಬ್ಬೆನಹಳ್ಳಿ ಸುದೀರ್ ಗೌಡರವರ ಕಾಫಿ ತೋಟದ
ಕೂಲಿ ಲೈನ್ ನಲ್ಲಿ ಸುಬ್ಬೆನಹಳ್ಳಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು.
ಸ್ವಂತ ವಿಳಾಸಃ ಅಡವಿಮಲ್ಲನ ಕೆರೆ ತಾಂಡ ಗ್ರಾಮ,
ವರಕನಹಳ್ಳಿ ಹೋಬಳಿ, ಹೂವಿನಹಡಗಲಿ ತಾಲ್ಲೂಕು,
ವಿಜಯನಗರ ಜಿಲ್ಲೆ.

### ದೋಷಾರೋಪಣೆ

ಶ್ರೀ. ವಿಶ್ವನಾಥ್ ಎ., *C/c* ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಫಲ್ಗುಣಿ ಗ್ರಾಮದ ಚಾಸಾ-2 ಸುದೀರ್ ಗೌಡ ರವರ ತಂದೆಯಾದ ಮೃತ ರಾಮೇಗೌಡರವರ ಹೆಸರಿನಲ್ಲಿರುವ ಮನೆಯಲ್ಲಿ ಚಾಸಾ-1 ಸೌಂದತ್ ಬಿ. ರವರು ವಾಸವಾಗಿದ್ದು, ಚಾಸಾ-1 ರವರು ಆರೋಪಿಯಾದ ನಿಮ್ಮನ್ನು ಅವರ ಮನೆಯ ಕೆಲಸಕ್ಕೆ ನೇಮಕ ಮಾಡಿಕೊಂಡಿರುತ್ತಾರೆ. ದಿನಾಂಕಃ 18.02.2024 ರಂದು ಚಾಸಾ-1 ರವರು 15 ಗ್ರಾಂ 850 ಮಿಲೀ ಗ್ರಾಂ ತೂಕವಿರುವ ಚಿನ್ನದ ಸರವನ್ನು ತಮ್ಮ ಮನೆಯ ಹಾಲ್ ಗೆ ಹೊಂದಿಕೊಂಡಿರುವ ರೂಂ ನಲ್ಲಿರುವ ಮರದ ಕಬೋರ್ಡ್ ನಲ್ಲಿಟ್ಟು ಬೀಗ ಹಾಕಿ ಕೀಯನ್ನು ಕಬೋರ್ಡ್ ಮೇಲೆ ಇಟ್ಟು ಮನೆಯಿಂದ ಹೊರಗೆ ಹೋಗಿದ್ದು, ಆರೋಪಿಯಾದ ನೀವು ಅದನ್ನು ಗಮನಿಸಿ ಚಾಸಾ-1 ರವರ ಮನೆಯೊಳಗೆ ಯಾರೂ ಇಲ್ಲದೆ ಇರುವುದನ್ನು ದೃಡಪಡಿಸಿಕೊಂಡು ಕಬೋರ್ಡ್ ನ ಮೇಲೆ ಇಟ್ಟಿದ್ದ ಬೀಗದ ಕೀಯನ್ನು ತೆಗೆದುಕೊಂಡು ಕಬೋರ್ಡ್ ನ್ನು ತೆರೆದು 15 ಗ್ರಾಂ 850 ಮಿಲೀ ಗ್ರಾಂ ತೂಕವಿರುವ ಚಿನ್ನದ ಸರವನ್ನು ಕಳ್ಳತನ ಮಾಡಿಕೊಂಡು ಬೀಗದ ಕೀಯನ್ನು ಯಥಾಸ್ಥಿತಿಯಲ್ಲಿ ಇಟ್ಟು ಹೋಗಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 381 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ-1 ರವರ ಬಳಿ ಕೆಲಸ ಮಾಡಿಕೊಂಡಿದ್ದರೂ ಸಹ, ಅವರ ಚಿನ್ನದ ಸರವನ್ನು ಅಪ್ರಮಾಣಿಕವಾಗಿ ಕಳ್ಳತನ ಮಾಡಿ ಮೂಡಿಗೆರೆಯಲ್ಲಿರುವ ಚಾಸಾ-4 ಹೇಮರಾಜ್ ಜೈನ್ ರವರ ಫೈನಾನ್ಸ್ ನಲ್ಲಿ ಅಡವಿಟ್ಟು 50,000/- ರೂ ಹಣವನ್ನು ಪಡೆದುಕೊಂಡು ಎಲ್ಲಾ ಹಣವನ್ನು ಉಪಯೋಗಿಸಿಕೊಂಡು, ಚಾಸಾ-1 ರವರಿಗೆ ಅಪರಾಧಿಕ ನಂಬಿಕೆ ದ್ರೋಹ ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 406 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ*,* ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ*.*

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ*?* ಅವುಗಳು ನಿಮಗೆ ಅರ್ಥವಾಯಿತೇ*?*

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ*?*

ಆರೋಪಿಯ ಉತ್ತರಃ

*(*ಆರೋಪಿಗೆ ದಿನಾಂಕ 23.09.2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

*Sd/-*
***C/c*** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 23.09.2024